ಗೋಪಾಲಿ ತಾಯಿಯ ಬೆನ್ನು ಸವರುತ್ತಾ ಸಮಾಧಾನ ಹೇಳಲು ಪ್ರಯತ್ನಿಸಿದ. ಸಾವಿಗೆ ಸಮಾಧಾನ ಹೇಳುವುದುಂಟೇ? ತಂದೆ ಕಪಿನಿಪತಿರಾಯರು ಮುನಿಸಿಪಾಲಿಟಿ ಆಫೀಸಿನ ಗುಮಾಸ್ತರಾಗಿ ರಿಟೈರಾಗಿದ್ದವರು. ಅಷ್ಟಿಷ್ಟು ದುಡಿದು ಒಂದು ಮನೆ, ಎರಡು ಮಳಿಗೆ ಹಾಕಿಸಿದ್ದರು. ಮಳಿಗೆಯ ಬಾಡಿಗೆ ಬರುತ್ತಿತ್ತು. ಮನೆ ಸ್ವಂತದ್ದು. ಗೋಪಾಲಿಗೆ ದಿನಪತ್ರಿಕೆಯೊಂದರಲ್ಲಿ ವರದಿಗಾರನ ನೌಕರಿ ಇತ್ತು. ಅವನೇ ಮುಂದುಬಿದ್ದು ತಂಗಿಯರಿಗೆ ಮದುವೆ ಮಾಡಿದ್ದ. ವಿಮಲ, ಕಮಲ ಲಕ್ಷಣವಾದ ಹೆಣ್ಣುಮಕ್ಕಳು. ಇಬ್ಬರಿಗೂ ಒಂದೊಂದು ಮಗು. ಕೊಟ್ಟ ಮನೆಯಲ್ಲಿ ನೆಮ್ಮದಿಯಾಗಿದ್ದರು. ಚಿಕ್ಕವಳ ಗಂಡನಿಗೆ ಧಾರವಾಡದಲ್ಲೇ ನೌಕರಿ ಇತ್ತು. ದೊಡ್ಡವಳ ಗಂಡ ಪುಣೆಯಲ್ಲಿ ಸರ್ಕಾರಿ ನೌಕರಿ ಮಾಡುತ್ತಿದ್ದ. ಗೋಪಾಲಿಯ ಹೆಂಡತಿಗೆ ಸಕ್ಕರೆ ರೋಗ. ಪ್ರಾರಂಭದಿಂದಲೂ ತುಂಬಿದ ಮೈಯಲ್ಲ. ಒಂದಲ್ಲ ಹತ್ತು ಕಡೆ ಗೋಪಾಲಿ ಡಾಕ್ಟರಿಗೆ ತೋರಿಸಿದ. ಊಹುಂ, ಗರ್ಭ ಚಿಗುರಲಿಲ್ಲ. ಜ್ಯೋತಿ ಮಾಡಿದ ಒಂದೇ ಒಂದು ತಪ್ಪೆಂದರೆ ಸಾರಸ್ವತ ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ್ದು. ಒಂದು ದಿನಕ್ಕೂ ಅತ್ತೆ ಸೇರುತ್ತಿರಲಿಲ್ಲ. "ನೀನು ಬಂದಿ, ದರಿದ್ರ ಬಡ್ಕೋತು. ಒಂದು ಕೂಸಿಲ್ಲ, ಹಾಲಿನ ಬಟ್ಲ ಇಲ್ಲ. ಬೆಳಿಗ್ಗೆದ್ದು ಮಾರಿ ನೋಡಿದ್ರೆ ಒಂದು ಕೆಲಸ ಆಗಂಗಿಲ್ಲ. ಚಂದಾಗಿ ಒಂದು ಅಡಿಗೆ ಮಾಡ್ಲಿಕ್ಕೆ ಬರಾಂಗಿಲ್ಲ. ಈ ತಿಂಗಳು ಮುಟ್ಟಾದ್ರೆ ಆಗ್ತಿ, ಇಲ್ಲಂದ್ರೆ ಇಲ್ಲ." ಅಮ್ಮನ ಗೊಣಗಾಟ ನಿರಂತರವಾಗಿ ನಡೆಯುತ್ತಿತ್ತು. ನರಪೇತಲ ದೇಹದ ಜ್ಯೋತಿ ಅತ್ತು ಅತ್ತು ಮತ್ತಷ್ಟು ಬೆಂಡಾಗಿ ಹೋಗಿದ್ದಳು. ಇದು ಹೀಗೇ ಬಿಟ್ಟರೆ ಬಗೆಹರಿಯುವುದಿಲ್ಲ ಎಂದು ತೀರ್ಮಾನಿಸಿದ ಗೋಪಾಲಿ ಅವರಿವರ ಕೈ ಕಾಲು ಹಿಡಿದುಕೊಂಡು ಜ್ಯೋತಿಗೆ ಧಾರವಾಡದ ಎಸ್.ಡಿ.ಎಂ. ಕಾಲೇಜಿನಲ್ಲಿ ಒಂದು ನೌಕರಿ ಕೊಡಿಸಿದ. ಬರಬರುತ್ತಾ ಗೋಪಾಲಿಗೆ ಹೆಂಡತಿಯ ಮೇಲೆ ಆಸಕ್ತಿ ಕೊನರಿ ಹೋಯಿತು. ಪಕ್ಕಕ್ಕೆ ಮಲಗಿದರೆ ಮೈ ಜುಂ ಎನ್ನುತ್ತಿರಲಿಲ್ಲ. ಅವಳು ಬಟ್ಟೆ ತೆಗೆದು ಯಾವ ಕಾಲವಾಗಿತ್ತೋ. ಅವನಿಗೆ ಜಾತಿಜಂಜಡವಿರಲಿಲ್ಲ. ಹಾಗೆ ನೋಡಿದರೆ ಜ್ಯೋತಿಯ ಮೇಲೆ ಪ್ರೀತಿಯೇ ಇತ್ತು. ಅಪರೂಪಕ್ಕೊಮ್ಮೆ ಸಿನಿಮಾಕ್ಕೆ ಕರೆದೊಯ್ಯುತ್ತಿದ್ದ. ಜ್ಯೋತಿಯಲ್ಲಿ ಒಳ್ಳೆಯತನವಿತ್ತು. ಆದರೂ ಗಂಡು ಬಯಸುವ ಯಾವುದೇ ಗುಣವಿರಲಿಲ್ಲ. ಅವಳಿಗೆ ಹಾಡು ಬರುತ್ತಿರಲಿಲ್ಲ. ಅಡುಗೆ ಬರುತ್ತಿರಲಿಲ್ಲ. ಹೌದೋ ಅಲ್ಲವೋ ಎಂಬಂತೆ ದೇವರ ಪೂಜೆ. ಸಾಹಿತ್ಯ, ಸಂಗೀತ ನಾಸ್ತಿ. ದುಂಬಾಲು ಬಿದ್ದು ಗಂಡನ ಹಿಂದೆ ಸಾಯಂಕಾಲ ಟಾಯವಾಕದ ತನಕ ವಾಕಿಂಗು ಹೋಗಿ ಬರುತ್ತಿದ್ದಳು. ಅಲ್ಲಾದರೂ ಅಷ್ಟೇ ಮಾತಿಲ್ಲ ಮುಮಗೇಡಿ ಇಲ್ಲ. ಅದೊಮ್ಮೆ ಜ್ಯೋತಿ ಟಾಯವಾಕಕ್ಕೆ ಹೋದಾಗ "ಏನ್ರೀ, ಯಾಕೋ ಬಹಳ ತುರುಸ್ತದ. ಈ ಮಧ್ಯೆ ಬಾಯಾರಿಕೆ ಜಾಸ್ತಿ. ಕೂತ್ರೂ ನಿಂತ್ರೂ ಸುಸ್ತಾಗ್ತದ. ಡಾಕ್ಟ್ರ ಕಡೆ ಕರ್‌ಕೊಂಡ್ ಹೋಗ್ರಿ" ಅಂದಿದ್ದಳು. ಗೋಪಾಲಿಗೆ ನಿಜಕ್ಕೂ ಕರುಣೆ ಎನಿಸಿತ್ತು. ಮರುದಿನವೇ ಸಾಯಂಕಾಲ ದೇಸಾಯಿ ಡಾಕ್ಟ್ರ ಬಳಿಗೆ ಕರೆದುಕೊಂಡು ಹೋಗಿ ಪರೀಕ್ಷಿಸಿದ. ಸ್ವಲ್ಪೇ ಹೊತ್ತಿಗೆ ದೇಸಾಯಿ ಡಾಕ್ಟ್ರು ಹೆಸರಿಟ್ಟಿದ್ದರು: ಜ್ಯೋತಿಗೆ ಡಯಾಬಿಟೀಸು. ಅವಳಿಗೆ ವಯಸ್ಸಾದರೂ ಎಷ್ಟು? ಮೂವತ್ತೈದು ಎಂಬುದು ಡಯಾಬಿಟೀಸು ಬರುವ ವಯಸ್ಸಲ್ಲ. ಮೊದಲೇ ಸೊರಗಿದ ದೇಹ. ಮತ್ತಷ್ಟು ಬಿಳುಚಿಕೊಂಡಿದ್ದಳು. ಬರ್ಚಗೆನ್ನೆಯಲ್ಲಿ ಬಣ್ಣವಿರಲಿಲ್ಲ. ಅವತ್ತೇ ಜ್ಯೋತಿ ಸೀರೆ ಬಿಟ್ಟು ಚೂಡಿದಾರ ತೊಡತೊಡಗಿದಳು. ಅದಕ್ಕೂ ಅವಳಿಗೆ ಅತ್ತೆಯ ಬೈಗುಳ. "ನೀನೇನು ಸಿನಿಮಾ ಸೇರ್‌ಕೋಬೇಕೇನೋ? ಬೆಳ್ಳಗಿದ್ದರೆ ಸಾಕಾ, ಒಂದು ಲಕ್ಷಣ ಅಂತ ಬ್ಯಾಡ. ಮೈಯಾಗ ಪಾವು ಮಾಂಸ ಇಲ್ಲ. ಏನ್ ಸುಖ ಪಟ್ಟನೋ ಗೋಪಾಲಿ? ಯಾಕಾರ ಬದುಕಿದಿಯೋ?"

"ಹೋಗ್ಲಿ ಬಿಡೇ. ಕಂಡವ್ರ ಮನೆ ಹೆಣ್ಮಕ್ಕಳನ್ನ ತಂದು ಸುಮ್ಮನೆ ಬೈಬಾರದು. ಅವ್ನ